**<u>ಸಾಕ್ಷಿಯನ್ನು ದಿನಾಂಕ *16.03.2026* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತುಃ</u>**

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>**

ನನ್ನನ್ನು ಪಿ.ಎಸ್.ಐ ರವರು ದಿನಾಂಕ 17.05.2018 ರಂದು ಗುಪ್ತ ಮಾಹಿತಿ ಕರ್ತವ್ಯಕ್ಕಾಗಿ ನನ್ನನ್ನು ನೇಮಿಸಿದ್ದರು. ಆ ದಿನ ಬಾತ್ಮಿದಾರರಿಂದ ಖಚಿತ ವರ್ತಮಾನ ನನಗೆ ಬಂದಿತ್ತು. ನನಗೆ ಈ ಪ್ರಕರಣದಲ್ಲಿ ವಿಶೇಷ ಪೊಲೀಸ್ ಅಧಿಕಾರಿ ನೊಟೀಸ್ ಕೊಟ್ಟಿರಲಿಲ್ಲ ಎಂದರೆ ಸರಿ. ನಾನು ದೂರನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ವರದಿಯನ್ನು ನೀಡಿರುತ್ತೇನೆ. ಠಾಣೆಯಲ್ಲಿ ಇದ್ದಂತಹ ಸಿಬ್ಬಂದಿಯವರು ವರದಿಯನ್ನು ಬೆರಳಚ್ಚು ಮಾಡಿದ್ದರು. ಆ ದಿನ ಮಧ್ಯಾಹ್ನ 2.00 ಗಂಟೆ ಸುಮಾರಿಗೆ ಖಚಿತ ವರ್ತಮಾನ ಬಂದಿತ್ತು. ನನಗಾಗಲೀ ಪಂಚರಿಗಗಾಗಲೀ ನನ್ನ ಮೇಲಾಧಿಕಾರಿಗಳು ನೊಟೀಸ್ ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ನಮ್ಮ ಠಾಣೆಯಿಂದ ವೇಶ್ಯವಾಟಿಕೆ ನಡೆಯುತ್ತಿತ್ತು ಎಂದು ಹೇಳುವ ಮನೆಗೆ ಸುಮಾರು 10 ಕಿ.ಮೀಟರ್ ಅಂತರ ಇತ್ತು. ನಮ್ಮ ಠಾಣೆಯಿಂದ ಆ ಮನಗೆ ತಲುಪಲು ಸುಮಾರು ಅರ್ಧ ಗಂಟೆ ಬೇಕಾಗುತ್ತದೆ ಎಂದರೆ ಸರಿ. ಆ ದಿನ ಠಾಣೆಯನ್ನು 3.10 ರಿಂದ 3.15 ಗಂಟೆಗೆ ಠಾಣೆಯನ್ನು ಬಿಟ್ಟು ಸ್ಥಳ ಕ್ಕೆ 3.40 ನಿಮಿಷಕ್ಕೆ ಹೋಗಿದ್ದೆವು. ನನಗೆ ದೂರನ್ನು ಕೊಡಲು ಯಾವುದೇ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ನಾವುಗಳು ರಮಾಬಾಯಿ ನಗರದಲ್ಲಿ ಇರುವ ಮನೆ ನಂಬರ್ 401 ಕ್ಕೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ವರದಿಯನ್ನು ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಾವು

ಆ ಮನಗೆ ಹೋಗುವ ಪೂರ್ವದಲ್ಲಿ ಆ ಮನೆಯಲ್ಲಿ ಯಾವ ನೊಂದ ಮಹಿಳೆ ಇದ್ದಳು ಎನ್ನುವ ಬಗ್ಗೆ ಖಚಿತ ಬಾತ್ಮಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತಹ ಮನೆಗೆ ಹೋಗದೇ ಇದ್ದರೂ ಸಹ ಠಾಣೆಯ ಅಂಕಿ ಅಂಶ ಸಲುವಾಗಿ ಸುಳ್ಳು ಪಿರ್ಯಾದು ನೀಡಿ ಸುಳ್ಳು ವರದಿ ನೀಡಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಇಲಾಖೆಯ ಜೀಪ್ ನಲ್ಲಿ ಇಬ್ಬರು ಮಹಿಳಾ ಪಿಸಿ ಮತ್ತು ಮೇಲಾಧಿಕಾರಿಗಳು ಹಾಗೂ ಸಿಬ್ಬಂದಿ ಕೂಡಿ ಹೋಗಿದ್ದೆವು. ಆ ದಿನ ಪಂಚರನ್ನು ಸೇರಿಸಿ 7–8 ಜನ ಇದ್ದೆವು. ಆ ದಿನ ಇನ್ಸ್ ಪೆಕ್ಟರ್ ರವರು ನಮ್ಮ ಜೊತೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ಪಂಚರು ಆ ದಿನ ಠಾಣೆಗೆ ಬಂದು ಸಹಿ ಮಾಡಿದ್ದರು ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆ ಮನೆಯಲ್ಲಿ ಎರಡು ಕೊಠಡಿ, ಒಂದು ವಿಶಾಲವಾದಂತಹ ಹಾಲ್ ಇತ್ತು. ಆ ಮನೆಯನ್ನು 20*30 ಅಳತೆಯಲ್ಲಿ ಕಟ್ಟಿದಂತಹ ಮನೆ ಇತ್ತು. ನಾವುಗಳು ಆ ಮನೆಗೆ ಹೋಗದೇ ಇದ್ದರೂ ಸಹ ಠಾಣೆಯ ಅಂಕಿ ಅಂಶದ ಸಲುವಾಗಿ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ಪಂಚನಾಮೆಯಲ್ಲಿ ಆ ದಿನ ದೊರೆತಿತ್ತು ಎಂದು ಹೇಳುವ ನೋಟುಗಳ ನಂಬರ್ ಬರೆದಿರುವುದಿಲ್ಲ. ಎಂ.ಒ–2 ಅನ್ನು ಮೆಡಿಕಲ್ ಶಾಪಿನಿಂದ ನಾವೇ ತೆಗೆದುಕೊಂಡು ಬಂದಿರತ್ತೇವೆ ಎಂದರೆ ಸರಿಯಲ್ಲ. ಎಂ.ಒ–2 ಅನ್ನು ಉಪಯೋಗಿಸಿದ್ದು ಇರಲಿಲ್ಲ ಎಂದರೆ ಸರಿಯಲ್ಲ. ಆ ದಿನ ಪಂಚರ ಸಮಕ್ಷಮ ಪಂಚನಾಮೆ ಮಾಡಿ ಎಂ.ಒ–1 ಅನ್ನು ಅಮಾನತ್ತು ಪಡಿಸಿಕೊಂಡಿತ್ತು. ನನಗೆ ಎಂ.ಒ–4 ಯಾರದು ಅಂತ ಈಗ ಗೊತ್ತಿರುವುದಿಲ್ಲ. ಅದೇ ರೀತಿ ಎಂ.ಒ–5 ಯಾರದು ಅಂತ ಈಗ ಹೇಳಲು ಆಗುವುದಿಲ್ಲ.

ಎಂ.ಒ–7 ಅನ್ನು ಸಹ ಯಾರಿಂದ ಅಮಾನತ್ತು ಪಡಿಸಿಕೊಂಡಿತ್ತು ಎಂದು ಈಗ ಹೇಳಲು ಆಗುವುದಿಲ್ಲ. ನಾನು ಹೇಳಿದಂತಹ ಮನೆಯಲ್ಲಿ ಯಾವುದೇ ವೇಶ್ಯಾವಾಟಿಕೆ ನಡೆಯದೇ ಇದ್ದರೂ ಸಹ ಸುಳ್ಳು ವರದಿ ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:– ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
**ಮೈಸೂರು**